ಉದಯವಾಣಿ

# ಅಂತರ್ ಕಾಲೇಜು ಬಾಸ್ಕೆಟ್‌ಬಾಲ್: ಜೈನ್ ವಿಶ್ವವಿದ್ಯಾನಿಲಯಕ್ಕೆ ಪ್ರಶಸ್ತಿ




**ಬೆಂಗಳೂರು:** ಡಾ.ರಾಜ್‌ಕುಮಾರ್ ಬಾಸ್ಕೆಟ್‌ಬಾಲ್ ಕ್ಲಬ್ ವತಿಯಿಂದ ಉದ್ಯಾನಗರಿಯಲ್ಲಿ ನಡೆದ ಅಖಿಲ ಭಾರತ ಅಂತರ್ ಕಾಲೇಜು ಬಾಸ್ಕೆಟ್‌ಬಾಲ್ ಕೂಟದ ಬಿಜಿಎಸ್ ಕಪ್ -2018 ಪ್ರಶಸ್ತಿಯನ್ನು ಬೆಂಗಳೂರಿನ ಜೈನ್ ವಿಶ್ವವಿದ್ಯಾನಿಲಯ ತಂಡ ಜಯಿಸಿತು. ಡಾ.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ 79-64 ಅಂಕಗಳ ಅಂತರದಿಂದ ಜೈನ್ ವಿವಿ ತಂಡವು ಚೆನ್ನೈನ ಎಸ್‌ಆರ್‌ಎಂ ವಿಶ್ವವಿದ್ಯಾನಿಲಯ ತಂಡವನ್ನು ಮಣಿಸಿತು. ಬೆಂಗಳೂರು ತಂಡದ ಗೆಲುವಿನಲ್ಲಿ ಧರಣಿ (24 ಅಂಕ) ಹಾಗೂ ಸಿ.ನಿಖಿಲ್ (15 ಅಂಕ) ಪ್ರಮುಖ ಪಾತ್ರನಿರ್ವಹಿಸಿದರು. ಇನ್ನು ಎಸ್‌ಆರ್‌ಎಂ ವಿವಿ ತಂಡದ ಪರ ಶಶಾಂಕ್ (29 ಅಂಕ) ಹಾಗೂ ವಿಮಲ್ (10 ಅಂಕ)ಗಳಿಸಿದರಾದರೂ ಗೆಲುವಿಗೆ ಯಾವುದೇ ಪ್ರಯೋಜನವಾಗಲಿಲ್ಲ.